© Ph. : 27682035

# ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ವಿ.ಜಿ. ಕಾಂಪ್ಲೆಕ್ಸ್, 1ನೇ ಮಹಡಿ, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110.

ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.in

ಸಂ. ಬಿಐಎಎಪಿಎ/ಟಿಪಿ/ಸಿಸಿ/28/2016-17/409 ದಿನಾಂಕ: 31 MAY 2017

*ಇವರಿಗೆ,*

ಮುಖ್ಯಾಧಿಕಾರಿಗಳು,
ಪುರಸಭೆ, ದೇವನಹಳ್ಳಿ,
ಬೆಂಗಳೂರು ಗ್ರಾಮಾಂತರ ಜಿಲ್ಲೆ

ವಿಷಯ: ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ದೇವನಹಳ್ಳಿ ಗ್ರಾಮದ ಸರ್ವೆ ನಂ. 341/1 ರಲ್ಲಿ (2ಎ–17ಗು), 342/1 ರಲ್ಲಿ (0–20ಗು), 342/2 ರಲ್ಲಿ (0–36ಗು), 343/1 ರಲ್ಲಿ (0–36ಗು), 343/2 ರಲ್ಲಿ (0ಎ–07ಗು), 345/2 ರಲ್ಲಿ (2ಎ–03½ಗು), 345/2 ರಲ್ಲಿ (1ಎ–25½ಗು), 359 ರಲ್ಲಿ (3ಎ–20ಗು), 360 ರಲ್ಲಿ (1ಎ–39ಗು), 361/2 ರಲ್ಲಿ (1ಎ–01ಗು), 362/1 ರಲ್ಲಿ (0–33ಗು), 362/2 ರಲ್ಲಿ (0–25ಗು) ಮತ್ತು 367/1 ರಲ್ಲಿ (1ಎ–35ಗು) ಒಟ್ಟು 18ಎಕರೆ 18ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಅನುಮೋದಿಸಲಾಗಿರುವ ಅಭಿವೃದ್ಧಿ ನಕ್ಷೆಯಲ್ಲಿನ ಖಾತಾ ಸಂಖ್ಯೆ 2714/241/1/ 342/1/ 342/2/343/1/343/2/345/2/345/2/359/360/361/2/362/1/362/2/367/1 ರ ಪ್ರದೇಶದಲ್ಲಿ ಬಿಲ್ಡಿಂಗ್ – 1 ರಿಂದ ಬಿಲ್ಡಿಂಗ್ 6 ರವರೆಗಿನ ಕಟ್ಟಡಗಳನ್ನು ಕಟ್ಟಲು ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:

| | |
|---|---|
| 1) ಅರ್ಜಿದಾರರ ಸಲ್ಲಿಸಿರುವ ಅರ್ಜಿ ಸಂಖ್ಯೆ | 3994 ದಿನಾಂಕ: 02–07–2016 ಮತ್ತು ಮನವಿ ಪತ್ರ ದಿನಾಂಕ: 26–09–2016 ಮತ್ತು 28–11–2016 |
| 2) ಈ ಪ್ರಾಧಿಕಾರದ ಸಭೆಯ ದಿನಾಂಕ: | ದಿನಾಂಕ: 20–01–2017 ರಂದು ನಡೆದ ಪ್ರಾಧಿಕಾರದ 117 ನೇ ಸಭೆಯ ವಿಷಯ ಸಂಖ್ಯೆ 117 [9 (ಬಿ)(1)] ರಲ್ಲಿ ಕೈಗೊಂಡ ನಿರ್ಣಯ |
| 3) ಈ ಪ್ರಾಧಿಕಾರದ ಸಮ ಸಂಖ್ಯೆ ಪತ್ರ ದಿನಾಂಕ: | 27–02–2017 |
| 4) ಪ್ರಾಧಿಕಾರಕ್ಕೆ ಶುಲ್ಕವನ್ನು ಪಾವತಿಸಿರುವ ವಿವರ | ಅರ್ಜಿದಾರರು ದಿನಾಂಕ: 05–04–2017 ರ ಮನವಿ ಪತ್ರದೊಂದಿಗೆ ಸಲ್ಲಿಸಿರುವ ಕೋಟಕ್ ಮಹೀಂದ್ರ ಬ್ಯಾಂಕ್, ಎಂ.ಜಿ. ರಸ್ತೆ ಶಾಖೆ, ಬೆಂಗಳೂರು ಇಲ್ಲಿನ ದಿನಾಂಕ: 04–04–2017 ರ ಡಿ.ಡಿ. ಸಂಖ್ಯೆ 889130 ರಲ್ಲಿ ರೂ. 25,92,000–00 (ಇಪ್ಪತ್ತೈದು ಲಕ್ಷದ ತೊಂಬತ್ತೆರಡು ಸಾವಿರ ರೂಪಾಯಿಗಳು ಮಾತ್ರ) ಮತ್ತು ಡಿ.ಡಿ. ಸಂಖ್ಯೆ 889131 ರಲ್ಲಿ ರೂ. 1,23,48,000–00 (ಒಂದು ಕೋಟಿ ಇಪ್ಪತ್ಮೂರು ಲಕ್ಷದ ನಲವತ್ತೆಂಟು ಸಾವಿರ ರೂಪಾಯಿಗಳು ಮಾತ್ರ) ಗಳಂತೆ ಒಟ್ಟು 1,49,40,000/– ಗಳನ್ನು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ ಹಾಗೂ ದಿನಾಂಕ: 12–04–2017 ರಂದು ಸ್ಟ್ರಕ್ಚರಲ್ ಸ್ಟೆಬಿಲಿಟಿ ಸರ್ಟಿಫಿಕೇಟ್ ಅನ್ನು ಸಲ್ಲಿಸಿರುತ್ತಾರೆ. |

Housiey.com

5) ಕಟ್ಟಡ ನಕ್ಷೆಯ ನೀಲಿ ಪ್ರತಿಗಳನ್ನು ಸಲ್ಲಿಸಿದ ದಿನಾಂಕ 17-05-2017

*******

**ಶ್ರೀ ಪಿ.ಕೆ. ಮಿಶ್ರಾ, ಅಥರೈಸ್ಡ್ ಸಿಗ್ನೇಟರಿ, ಮೆ॥ ಸಲಾರ್‌ಪುರಿಯಾ ರಿಯಲ್ ಎಸ್ಟೇಟ್ ಪ್ರೈವೇಟ್ ಲಿಮಿಟೆಡ್** ಇವರು ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ದೇವನಹಳ್ಳಿ ಗ್ರಾಮದ ಸರ್ವೆ ನಂ. 341/1 ರಲ್ಲಿ (2ಎ-17ಗು), 342/1 ರಲ್ಲಿ (0-20ಗು), 342/2 ರಲ್ಲಿ (0-36ಗು), 343/1 ರಲ್ಲಿ (0-36ಗು), 343/2 ರಲ್ಲಿ (0ಎ-07ಗು), 345/2 ರಲ್ಲಿ (2ಎ-03½ಗು), 345/2 ರಲ್ಲಿ (1ಎ-25½ಗು), 359 ರಲ್ಲಿ (3ಎ-20ಗು), 360 ರಲ್ಲಿ (1ಎ-39ಗು), 361/2 ರಲ್ಲಿ (1ಎ-01ಗು), 362/1 ರಲ್ಲಿ (0-33ಗು), 362/2 ರಲ್ಲಿ (0-25ಗು) ಮತ್ತು 367/1 ರಲ್ಲಿ (1ಎ-35ಗು) ಒಟ್ಟು 18ಎಕರೆ 18ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಅನುಮೋದಿಸಲಾಗಿರುವ ಅಭಿವೃದ್ಧಿ ನಕ್ಷೆಯಲ್ಲಿನ **ಖಾತಾ ಸಂಖ್ಯೆ 2714/241/1/342/1/342/2/343/1/343/2/345/2/345/2/359/360/361/2/362/1/362/2/367/1 ರ ಪ್ರದೇಶದಲ್ಲಿ ಬಿಲ್ಡಿಂಗ್ – 1 ರಿಂದ ಬಿಲ್ಡಿಂಗ್ 6 ರವರೆಗಿನ ಕಟ್ಟಡಗಳನ್ನು *ಕಟ್ಟುವ ಸಲುವಾಗಿ*** ಪ್ರಾಧಿಕಾರದಿಂದ ಅನುಮೋದನೆ ನೀಡಲು ಕೋರಿ ಉಲ್ಲೇಖ (1) ರಂತೆ ಅರ್ಜಿ ಸಲ್ಲಿಸಿದ್ದು, ಸಲ್ಲಿಸಿರುವ ಕಟ್ಟಡ ನಕ್ಷೆಯು ವಲಯ ನಿಯಮಾವಳಿಗಳನ್ವಯ ಸೂಕ್ತವಾಗಿರುವ ಕಾರಣ, ಉಲ್ಲೇಖ (2) ರ ದಿನಾಂಕ: 20-01-2017 ರಂದು ನಡೆದ ಪ್ರಾಧಿಕಾರದ 117 ನೇ ಸಭೆಯ ವಿಷಯ ಸಂಖ್ಯೆ 117 [9(ಬಿ)(1)] ರಲ್ಲಿ ಮಂಡಿಸಲಾಗಿದ್ದು, ಸಭೆಯಲ್ಲಿ ಪ್ರಸ್ತಾವನೆಗೆ ಅನುಮೋದನೆ ನೀಡಲು ನಿರ್ಣಯಿಸಲಾಗಿರುತ್ತದೆ.

ಸಭೆಯ ನಿರ್ಣಯದನ್ವಯ ಉಲ್ಲೇಖ (3) ರ ಪ್ರಾಧಿಕಾರದ ಪತ್ರದಲ್ಲಿ ಕಟ್ಟಡ ನಕ್ಷೆ ಅನುಮೋದನೆ ಸಂಬಂಧ ಶುಲ್ಕ ಪಾವತಿಸಲು ಹಾಗೂ ಸ್ಟ್ರಕ್ಚರಲ್ ಸ್ಟೆಬಿಲಿಟಿ ಸರ್ಟಿಫಿಕೇಟ್ ಮತ್ತು ನ್ಯೂನ್ಯತೆಗಳನ್ನು ಸರಿಪಡಿಸಿರುವ ಕಟ್ಟಡ ನಕ್ಷೆಯ ನೀಲಿ ಪ್ರತಿಗಳನ್ನು ಸಲ್ಲಿಸಲು ಸೂಚಿಸಲಾಗಿರುತ್ತದೆ. ಅದರಂತೆ, ಉಲ್ಲೇಖ (4) ರಂತೆ ನಿಗಧಿತ ಶುಲ್ಕಗಳನ್ನು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ ಮತ್ತು ಸ್ಟ್ರಕ್ಚರಲ್ ಸ್ಟೆಬಿಲಿಟಿ ಸರ್ಟಿಫಿಕೇಟ್‌ಅನ್ನು ಸಲ್ಲಿಸಿರುತ್ತಾರೆ. ಉಲ್ಲೇಖ (5) ರಂತೆ ನ್ಯೂನ್ಯತೆಗಳನ್ನು ಸರಿಪಡಿಸಿರುವ ಕಟ್ಟಡ ನಕ್ಷೆಯ ನೀಲಿ ಪ್ರತಿಗಳನ್ನು ಸಲ್ಲಿಸಿರುತ್ತಾರೆ.

ಹಾಗಾಗಿ, ಉಲ್ಲೇಖ (2) ರ ಪ್ರಾಧಿಕಾರದ ಸಭೆಯ ನಿರ್ಣಯದಂತೆ ಈ ಕೆಳಕಂಡ ನಿಬಂಧನೆಗಳೊಂದಿಗೆ **"ಕಟ್ಟಡ ನಕ್ಷೆಗೆಳಿಗೆ ತಾಂತ್ರಿಕ ಅನುಮೋದನೆಯನ್ನು"** ಮಾತ್ರ ನೀಡಲಾಗಿದೆ.

## ನಿಬಂಧನೆಗಳು

1. ಯೋಜಿಸಿರುವ ಕಟ್ಟಡವನ್ನು ***"ವಸತಿ ಮತ್ತು ವಾಣಿಜ್ಯ"*** ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಬೇಕು.

2. ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆ ನೀಡಲಾದ ಕಟ್ಟಡದ ನಕ್ಷೆಯನ್ವಯ ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ಮತ್ತು ಕಟ್ಟಡ ಪರವಾನಿಗೆಯನ್ನು ದೇವನಹಳ್ಳಿ ಪುರಸಭೆಯಿಂದ ನೀಡತಕ್ಕದ್ದು.

3. ಕಟ್ಟಡವನ್ನು ಹಾಲಿ ಇರುವ ವಲಯ ನಿಯಮಾವಳಿ ಹಾಗೂ ಕಟ್ಟಡದ ವಿಧಿಯ ಪ್ರಕಾರ ಕಟ್ಟಬೇಕು. ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಅನುಮೋದಿಸಿರುವ ಕಟ್ಟಡದ ನಕ್ಷೆಯಂತೆಯೇ ಕೈಗೊಳ್ಳಬೇಕು. ಕಟ್ಟಡ ಅಭಿವೃದ್ಧಿಯಲ್ಲಿನ ಯಾವುದೇ ಬದಲಾವಣೆಯನ್ನು ಈ ಕಛೇರಿಯ ಪೂರ್ವಾನುಮತಿ ಪಡೆಯದೇ ಮಾಡತಕ್ಕದ್ದಲ್ಲ.

© Ph. : 27682035

# ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ವಿ.ಜಿ. ಕಾಂಪ್ಲೆಕ್ಸ್, 1ನೇ ಮಹಡಿ, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110.
ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.in

4. **"ವಸತಿ ಮತ್ತು ವಾಣಿಜ್ಯ"** ಉಪಯೋಗಕ್ಕೆ ಕಟ್ಟಡ ಕಟ್ಟಲು ನಕ್ಷೆಯಲ್ಲಿ ಬಿಟ್ಟಿರುವಂತೆ ನಡುಜಾಗವನ್ನು ಬಿಟ್ಟು ಕಟ್ಟಡ ಕಟ್ಟತಕ್ಕದ್ದು ಮತ್ತು ಹಾಲಿರಸ್ತೆಯು ಜಿಲ್ಲಾ ಮುಖ್ಯ ರಸ್ತೆ/ರಾಜ್ಯ/ರಾಷ್ಟ್ರೀಯ ಹೆದ್ದಾರಿ ರಸ್ತೆಯಾಗಿದ್ದಲ್ಲಿ ಹೆದ್ದಾರಿಯ ಮಧ್ಯಭಾಗದಿಂದ ನಿಯಮಾವಳಿಯಂತೆ ಜಾಗವನ್ನು ಬಿಟ್ಟು ಕಟ್ಟತಕ್ಕದ್ದು.

5. ಕಟ್ಟಡದ ಮತ್ತು ಯಾವುದೇ ಅಭಿವೃದ್ಧಿಯ ತಳಪಾಯ, ಅಗ್ನಿಶಾಮಕ ವ್ಯವಸ್ಥೆ ಹಾಗೂ ಇತರ ಭದ್ರತಾ ವ್ಯವಸ್ಥೆಗಳು ಅರ್ಜಿದಾರರ ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ. ಈ ಸಂಬಂಧ ಯಾವುದೇ ಅನಾಹುತಗಳಿಗೆ ಈ ಪ್ರಮಾಣ ಪತ್ರ ಬದ್ಧವಲ್ಲ ಹಾಗೂ ಪ್ರಾಧಿಕಾರವು ಜವಾಬ್ದಾರರಾಗುವುದಿಲ್ಲ.

6. ಕಟ್ಟಡ ಭದ್ರತೆಯ ಕುರಿತು ನುರಿತ (Structural Engineer) ತಜ್ಞರಿಂದ Structural Details ಪಡೆದು ಅದರಂತೆ ನಿರ್ವಹಿಸುವುದು ಹಾಗೂ ಅವಶ್ಯಕ ಮುಂಜಾಗ್ರತೆಗಳನ್ನು ಕೈಗೊಳ್ಳತಕ್ಕದ್ದು. ಈ ಕುರಿತು ಪ್ರಾಧಿಕಾರಕ್ಕೆ ಯಾವುದೇ ಜವಾಬ್ದಾರಿ ಇರುವುದಿಲ್ಲ.

7. ಪ್ರಸ್ತಾವನೆ ಸಂಬಂಧ ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ: AAI/BIA/ATM/NOC/BIAL/SOUTH/B/103114/69598/2733-37 ದಿನಾಂಕ: 17-12-2014ರಲ್ಲಿ ವಿಧಿಸ -ಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

8. ಪ್ರಸ್ತಾವನೆ ಸಂಬಂಧ ಅಗ್ನಿಶಾಮಕ ಇಲಾಖೆ ರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ: GBC (1) 365/2015 ದಿನಾಂಕ: 13-04-2016 ರಲ್ಲಿ ವಿಧಿಸಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

9. ಪ್ರಸ್ತಾವನೆ ಸಂಬಂಧ ಬೆಸ್ಕಾಂರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ: SEE/BRC/EE(O)/AEE-2/15-16/5885-87 ದಿನಾಂಕ: 21-01-2016 ರಲ್ಲಿ ವಿಧಿಸಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

10. ಪ್ರಸ್ತಾವನೆ ಸಂಬಂಧ ಬಿಎಸ್‌ಎನ್‌ಎಲ್‌ರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ: AGM (TP)/S-6/Vol-33/2014-15/09 ದಿನಾಂಕ: 03-12-2014 ರಲ್ಲಿ ವಿಧಿಸಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

11. ಪ್ರಸ್ತಾವನೆ ಸಂಬಂಧ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ: PCB/31/CNP/16/ H-610 ದಿನಾಂಕ: 22-11-2016 ರಲ್ಲಿ ವಿಧಿಸಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

12. ಪ್ರಸ್ತಾವನೆ ಸಂಬಂಧ ಸ್ಟೇಟ್ ಲೆವೆಲ್ ಎನ್‌ವಿರಾನ್‌ಮೆಂಟ್ ಇಂಫಾಕ್ಟ್ ಅಸೆಸ್‌ಮೆಂಟ್ ಅಥಾರಿಟಿ-ಕರ್ನಾಟಕ ರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ: SEIAA 17 CON 2016 ದಿನಾಂಕ: 28-10-2016 ರಲ್ಲಿ ವಿಧಿಸಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

13. ದೇವನಹಳ್ಳಿ ಪುರಸಭೆಯಿಂದ ಪ್ರಾರಂಭಿಕ ಪ್ರಮಾಣ ಪತ್ರ ಹಾಗೂ ಕಟ್ಟಡ ಪರವಾನಿಗೆ ನೀಡುವ ಪೂರ್ವದಲ್ಲಿ ದೇವನಹಳ್ಳಿ ಪುರಸಭೆಯು ಕಡ್ಡಾಯವಾಗಿ ಕಟ್ಟಡದ ಎತ್ತರದ ಕುರಿತು ಏರ್‌ಪೋರ್ಸ್, ಯಲಹಂಕರವರಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯುವ ಷರತ್ತಿಗೊಳಪಟ್ಟಿರುತ್ತದೆ.

14. ವಿಮಾನ ಹಾರಾಟದಿಂದ ಉಂಟಾಗುವ ಶಬ್ದ ಮಾಲಿನ್ಯಕ್ಕೆ ಪ್ರಾಧಿಕಾರವು ಜವಾಬ್ದಾರಿಯಾಗುವುದಿಲ್ಲ.

15. ಕಾಮಗಾರಿಗಳಿಂದಾಗಿ ಪರಿಸರವು ಮಾಲಿನ್ಯವಾಗದಂತೆ ಎಚ್ಚರಿಕೆ ವಹಿಸತಕ್ಕದ್ದು ಮತ್ತು ಸ್ವಾಭಾವಿಕ ಮಳೆಯ ನೀರು ಇಂಗಿ ಹೋಗಲು ವ್ಯವಸ್ಥೆ (Rain Water harvesting) ಯನ್ನು ಮಾಡತಕ್ಕದ್ದು ಮತ್ತು ಸೌರಶಕ್ತಿ ವ್ಯವಸ್ಥೆಯನ್ನು ಕಟ್ಟಡದಲ್ಲಿ ಒದಗಿಸತಕ್ಕದ್ದು ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ನಿವೇಶನದ ಮುಂಭಾಗದಲ್ಲಿ ಗಿಡ/ಮರವನ್ನು ಬೆಳೆಸತಕ್ಕದ್ದು.

Housiey.com

16. ಈ ತಾಂತ್ರಿಕ ಅನುಮೋದನೆ ನೀಡಿರುವ ಮಾತ್ರಕ್ಕೆ ಯಾವುದೇ ಸೌಲಭ್ಯವನ್ನು ಅರ್ಜಿದಾರರಿಗೆ ನೀಡುವ ಹೊಣೆಗಾರಿಕೆ ಪ್ರಾಧಿಕಾರಕ್ಕಿರುವುದಿಲ್ಲ.

17. ಈ ತಾಂತ್ರಿಕ ಅನುಮೋದನೆ ನೀಡಿರುವ ನಕ್ಷೆಯು ಕಟ್ಟಡ ನಿರ್ಮಾಣ ಸ್ಥಳದಲ್ಲಿ ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು.

18. ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳಬಾರದು.

19. ಈ ಪ್ರಾಧಿಕಾರದ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು ಹಾಗೂ ಸಂಪರ್ಕ ರಸ್ತೆಯ ಬಗ್ಗೆ ಯಾವುದೇ ತಕರಾರು ಬಂದರೂ ಈ ಪ್ರಾಧಿಕಾರವು ಹೊಣೆಯಲ್ಲ ಮತ್ತು ಅರ್ಜಿದಾರರು ಸ್ವಂತ ಜವಾಬ್ದಾರಿಯಿಂದ ಬಗೆಹರಿಸಿಕೊಳ್ಳತಕ್ಕದ್ದು.

20. ಈ ಅನುಮತಿಯನ್ನು ಉಲ್ಲಂಘಿಸಿ ಅರ್ಜಿದಾರರು ಅಭಿವೃದ್ಧಿಯನ್ನು ಕೈಗೊಂಡರೆ ಅಥವಾ ನೀಡಿರುವ ಮಾಹಿತಿಗಳು ದೋಷ ಪೂರ್ಣವಾಗಿದ್ದರೆ ಅನುಮತಿಯನ್ನು ಹಿಂತೆಗೆದುಕೊಳ್ಳಲಾಗುವುದಲ್ಲದೇ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಅನ್ವಯ ಕ್ರಮ ತೆಗೆದುಕೊಳ್ಳಲಾಗುವುದು.

21. ಇತರೆ ಇಲಾಖೆಗಳಿಂದ ಅಗತ್ಯವಿರುವ ಅನುಮತಿ/ನಿರಾಕ್ಷೇಪಣಾ ಪತ್ರಗಳನ್ನು ಸಹ ಅರ್ಜಿದಾರರು ಪಡೆಯತಕ್ಕದ್ದು.

22. ಅರ್ಜಿದಾರರು ಸಲ್ಲಿಸಿರುವ ಮಾಹಿತಿ/ದಾಖಲಾತಿಗಳು ಸುಳ್ಳು ಅಥವಾ ಪೋರ್ಜರಿಗಳಾಗಿದ್ದರೆ ಈ ಕಛೇರಿಯಿಂದ ನೀಡಿರುವ ತಾಂತ್ರಿಕ ಅನುಮೋದನೆಯು ತಂತಾನೆ ರದ್ದಾಗುತ್ತದೆ ಹಾಗೂ ಸಿವಿಲ್ ವ್ಯಾಜ್ಯಗಳಿಗೆ ಈ ಪ್ರಾಧಿಕಾರದ ಹೊಣೆಗಾರಿಕೆ ಇರುವುದಿಲ್ಲ.

ಈ ಮೇಲಿನ ನಿಬಂಧನೆಗಳೊಂದಿಗೆ ಕಟ್ಟಡದ ನಕ್ಷೆಗಳಿಗೆ ತಾಂತ್ರಿಕ ಅನುಮೋದನೆಯನ್ನು ಮಾತ್ರ ನೀಡಲಾಗಿದ್ದು, ಸರ್ಕಾರದ ಅಧಿಸೂಚನೆಯಂತೆ ಪುರಸಭೆ ವ್ಯಾಪ್ತಿಯಲ್ಲಿ ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಅಧಿಕಾರವು ಪುರಸಭೆಗೆ ಪ್ರತ್ಯಾಯೋಜಿಸಿರುವುದರಿಂದ ಅದರಂತೆ ಪ್ರಾರಂಭಿಕ ಪ್ರಮಾಣ ಪತ್ರ ಹಾಗೂ ಕಟ್ಟಡ ಪರವಾನಿಗೆಯನ್ನು ನಿಯಮಾವಳಿಯನ್ವಯ ಶುಲ್ಕ ಪಾವತಿಸಿಕೊಂಡು ನೀಡುವ ಬಗ್ಗೆ ಈ ಪತ್ರದೊಂದಿಗೆ ತಾಂತ್ರಿಕ ಅನುಮೋದನೆ ನೀಡಲಾದ ನಾಲ್ಕು (4) ಕಟ್ಟಡ ನಕ್ಷೆಗಳನ್ನು ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

31.5.17

**ನಗರ ಮತ್ತು ಗ್ರಾಮಾಂತರ ಯೋಜನಾ**
**ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ,**
ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ದೇವನಹಳ್ಳಿ

ಪ್ರತಿಯನ್ನು :

**ಶ್ರೀ ಪಿ.ಕೆ. ಮಿಶ್ರಾ, ಅಥರೈಸ್ಡ್ ಸಿಗ್ನೇಟರಿ,** ಮೆ॥ ಸಲಾರ್‌ಪುರಿಯಾ ರಿಯಲ್ ಎಸ್ಟೇಟ್ ಪ್ರೈವೇಟ್ ಲಿಮಿಟೆಡ್, ನಂ. 3, ನಾಲ್ಕನೇ ಮತ್ತು ಐದನೇ ಮಹಡಿ, ಹಲಸೂರು ರಸ್ತೆ, ಬೆಂಗಳೂರು 560 042 ರವರಿಗೆ ತಾಂತ್ರಿಕ ಅನುಮೋದನೆ ನೀಡಲಾದ ಕಟ್ಟಡ ನಕ್ಷೆಯ 1 ಪ್ರತಿಯನ್ನು ಮಾತ್ರ ಮಾಹಿತಿಗಾಗಿ ಕಳುಹಿಸಲಾಗುತ್ತಿದ್ದು, ದೇವನಹಳ್ಳಿ ಪುರಸಭೆಯಿಂದ ಪ್ರಾರಂಭಿಕ ಪ್ರಮಾಣ ಪತ್ರ ಮತ್ತು ಕಟ್ಟಡ ಪರವಾನಿಗೆಯನ್ನು ಪಡೆದ ನಂತರವೇ ಕಟ್ಟಡ ಕಾಮಗಾರಿಯನ್ನು ಪ್ರಾರಂಭ ಮಾಡತಕ್ಕದ್ದು.

Housiey.com